# ಭಾಷೆಯ ಮೇಲೆ ಎ.ಐ. ಮಾಧ್ಯಮದ ಪ್ರಭಾವ

**ರತ್ನಮಂಜರಿ ಕೆ.ಜಿ.***

**DOI: https://doi.org/10.5281/zenodo.21241809**

**ABSTRACT**

ಆಧುನಿಕ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮಗಳ ನಿರಂತರ ಬಳಕೆಯಿಂದ ಭಾಷೆಯ ರಚನೆ, ಸಂವಹನ ಶೈಲಿ ಹಾಗೂ ವಿಕಾಸದ ಮೇಲಾಗುತ್ತಿರುವ ಆಳವಾದ ಪ್ರಭಾವಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವು ನೈಜ ಸಮಯದ ಭಾಷಾಂತರ, ಭಾಷಾ ವಿಶ್ಲೇಷಣೆ ಮತ್ತು ಹೊಸ ಅಭಿವ್ಯಕ್ತಿಗಳ ಸೃಷ್ಟಿಗೆ ಮುನ್ನುಡಿ ಬರೆದಿದೆ. ಇದೇ ವೇಳೆ, ತ್ವರಿತ ಸಂವಹನಕ್ಕಾಗಿ ಬಳಸುತ್ತಿರುವ ಸಂಕ್ಷಿಪ್ತ ಪದಗಳು ಮತ್ತು ಎಮೋಜಿಗಳಿಂದಾಗಿ ಭಾಷೆಯ ವ್ಯಾಕರಣ, ಸಾಂಪ್ರದಾಯಿಕ ಶುದ್ಧತೆ ಹಾಗೂ ಭಾವನಾತ್ಮಕತೆಯ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನೂ ಚರ್ಚಿಸಲಾಗಿದೆ. ತಂತ್ರಜ್ಞಾನದ ಮೂಲಕ ಭಾಷೆ ಜಾಗತಿಕವಾಗಿ ವಿಸ್ತರಿಸುತ್ತಿರುವ ಸಕಾರಾತ್ಮಕ ಬೆಳವಣಿಗೆಯ ಜೊತೆಗೆ, ಅಶ್ಲೀಲ ಪದಬಳಕೆ ಹಾಗೂ ಅಭ್ಯಾಸದ ಕೊರತೆಯಂತಹ ನಕಾರಾತ್ಮಕ ಸವಾಲುಗಳನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ, ಭಾಷೆಯ ನೈಜ ಸೌಂದರ್ಯ, ಅನನ್ಯತೆ ಮತ್ತು ಗೌರವವನ್ನು ಉಳಿಸಿಕೊಳ್ಳುತ್ತಲೇ ಕೃತಕ ಬುದ್ಧಿಮತ್ತೆ ಮತ್ತಿತರ ಹೊಸ ತಂತ್ರಜ್ಞಾನಗಳನ್ನು ಎಚ್ಚರಿಕೆಯಿಂದ ಅಳವಡಿಸಿಕೊಳ್ಳುವ ಅಗತ್ಯವನ್ನು ಎತ್ತಿಹಿಡಿಯಲಾಗಿದೆ.

**KEYWORDS:** ಕೃತಕ ಬುದ್ಧಿಮತ್ತೆ (ಎ.ಐ.), ಸಾಮಾಜಿಕ ಮಾಧ್ಯಮ, ಭಾಷಾ ವಿಕಾಸ, ಸಂವಹನ ತಂತ್ರಜ್ಞಾನ, ಭಾಷಾ ಸರಳೀಕರಣ.

* **ಡಾ. ರತ್ನಮಂಜರಿ ಕೆ.ಜಿ.,** ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ತುಮಕೂರು.

ಇಂದು ಮುಂದುವರಿದ ತಂತ್ರಜ್ಞಾನ ಯುಗದಲ್ಲಿ ನಾವಿದ್ದೇವೆ, ಸಾಮಾಜಿಕ ಮಾಧ್ಯಮಗಳು ಮನುಷ್ಯನ ಸಂವಹನದ ಸ್ವರೂಪವನ್ನು ಬದಲಾಯಿಸಿರುವ ಶಕ್ತಿಶಾಲಿ ಸಾಧನಗಳಾಗಿವೆ. ಭಾಷೆ ಮಾನವ ಸಮಾಜದ ಮೂಲಭೂತ ಅಂಶವಾಗಿರುವ ಕಾರಣ ತಂತ್ರಜ್ಞಾನಗಳಂತಹ ಸಾಮಾಜಿಕ ಮಾಧ್ಯಮಗಳ ವ್ಯಾಪಕ ಬಳಕೆ ಭಾಷೆಯ ರಚನೆ, ಶುದ್ಧತೆ, ಬಳಕೆ, ವಿಕಾಸದ ಮೇಲೆ ಆಳವಾದ ಪ್ರಭಾವವನ್ನು ಬೀರಿರುವುದು ಕಂಡುಬಂದಿದೆ. ಅಂತರ್ಜಾಲ ತಾಣಗಳಾದಂತಹ ವಾಟ್ಸಪ್, ಫೇಸ್‌ಬುಕ್, ಇನ್‌ಸ್ಟಾ, ಟ್ವಿಟ್ಟರ್, ಯೂಟ್ಯೂಬ್ ಮುಂತಾದ ಬಹುಮುಖ ವೇದಿಕೆಗಳು ತ್ವರಿತ ಸಂವಹನಕ್ಕೆ ಒತ್ತು ನೀಡುವ ಮೂಲಕ ಭಾಷೆಯನ್ನು ಸರಳತೆ, ಸಂಕ್ಷಿಪ್ತತೆ ಮತ್ತು ಕೆಲವೊಮ್ಮೆ ಎರಡು ರೂಪದಲ್ಲಿ ಬಳಸುವ ಕೌಶಲ್ಯವನ್ನು ಹೆಚ್ಚಿಸಿವೆ. ಇದರ ಪರಿಣಾಮವಾಗಿ ಹೊಸ ಹೊಸ ಪದಗಳ ಸೃಷ್ಟಿ, ಅರ್ಥ ವ್ಯಾಪ್ತಿ ಮತ್ತು ಅಭಿವ್ಯಕ್ತಿಯ ಹೊಸ ಶೈಲಿಗಳು ಕೂಡ ಬೆಳೆಯುತ್ತಿವೆ. ಕನ್ನಡವು ಸೇರಿದಂತೆ ಭಾರತೀಯ ಭಾಷೆಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಜಾಗತಿಕ ಮಟ್ಟದಲ್ಲಿ ಪರಿಚಯವಾಗುತ್ತಿರುವುದು ಒಂದು ಸಕಾರಾತ್ಮಕ ಬೆಳವಣಿಗೆ ಎಂದರೆ ತಪ್ಪಾಗಲಾರದು.

ಸಾಮಾಜಿಕ ಮಾಧ್ಯಮಗಳು ಭಾಷೆಯ ಬಳಕೆಯ ಮೇಲೆ ಬೀರಿದ ಪ್ರಭಾವವನ್ನು ಅರ್ಥಮಾಡಿಕೊಳ್ಳಲು ಮತ್ತು ವಿಶ್ಲೇಷಣೆ ನಡೆಸಲು ಕೃತಕ ಬುದ್ಧಿಮತ್ತೆ (ಎ.ಐ.) ತಂತ್ರಜ್ಞಾನವು ಅತ್ಯಂತ ಪರಿಣಾಮಕಾರಿ, ಪ್ರಭಾವಕಾರಿ ಸಾಧನವಾಗಿ ಹೊರಹೊಮ್ಮಿದೆ. ಇಂದಿನ ದಿನದಲ್ಲಿ ತಂತ್ರಜ್ಞಾನ ಹೇಗೆ ಬದಲಾಗುತ್ತಿದೆ ಎಂಬುದನ್ನು ತಿಳಿಯೋಣ.

ಭಾಷಾ ಅಧ್ಯಯನದಲ್ಲಿ ಪ್ರಮುಖ ಪಾತ್ರವನ್ನು ವಿಶ್ಲೇಷಿಸಿದಾಗ ಸಾಮಾಜಿಕ ಮಾಧ್ಯಮಗಳಲ್ಲಿನ ಲಕ್ಷಾಂತರ ಪೋಸ್ಟ್, ಕಾಮೆಂಟ್ಸ್ ಮುಂತಾದವನ್ನು ಕ್ಷಣಾರ್ಧದಲ್ಲಿ ವಿಶ್ಲೇಷಣೆ ನಡೆಸಿ ಅದರ ಸತ್ಯಾಸತ್ಯತೆ, ನೈಜತೆಯನ್ನು ಪರಿಶೀಲಿಸುವ ಒಂದು ಮುಖ್ಯ ಅಸ್ತ್ರವಾಗಿದೆ. ವಿವಿಧ ಪ್ರದೇಶಗಳ ಜನರು ಬಳಸುವ ಉಪಭಾಷೆಗಳು ಮತ್ತು ಜಾನಪದೀಯ ಭಾಷೆಯ ಶೈಲಿಗಳನ್ನು ಗುರುತಿಸಿ ಭಾಷೆಯ ವಿಕಾಸವನ್ನು ಅಧ್ಯಯನ ನಡೆಸಲು ಸಹಾಯ ಮಾಡುತ್ತದೆ.

**ಎ.ಐ. ಮಾಧ್ಯಮ ಮತ್ತು ಭಾಷೆಯ ಬಳಕೆ**

ಸಾಮಾಜಿಕ ಮಾಧ್ಯಮಗಳ ಮೂಲಕ ಭಾಷೆಯ ಬಳಕೆ ಅಪರಿಮಿತವಾಗಿದೆ. ಹಿಂದೆಲ್ಲಾ ಮಿತವಾದ ವಲಯಗಳಲ್ಲಿ ಮಾತ್ರ ಬಳಕೆಯಾಗುತ್ತಿದ್ದ ತಂತ್ರಜ್ಞಾನ ಅಭಿವ್ಯಕ್ತಿಗಳು ಇಂದು ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಪ್ರಸಾರವಾಗುತ್ತಿವೆ. ಕನ್ನಡ ಸೇರಿದಂತೆ ಹಲವು ಭಾಷೆಗಳು ಸಾಮಾಜಿಕ ಮಾಧ್ಯಮದ ಮೂಲಕ ಜೀವಂತಿಕೆ ಪಡೆದಿವೆ. ಕವಿತೆಗಳು, ಲೇಖನಗಳು, ನುಡಿಗಟ್ಟುಗಳು, ಜನಪದ ಸಾಹಿತ್ಯ, ವಚನ ಸಾಹಿತ್ಯ, ಶಿಷ್ಟ ಸಾಹಿತ್ಯ, ಲಲಿತ ಸಾಹಿತ್ಯಗಳನ್ನು ಜನರು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಮತ್ತು ಹಂಚಲು ಸಾಧ್ಯವಾಗಿದೆ. ಇದರಿಂದ ಭಾಷೆಯ ವಿಸ್ತಾರ ಮತ್ತು ಜನಪ್ರಿಯತೆ ಹೆಚ್ಚಾಗಿದೆ.

**ಭಾಷೆಯ ವಿಕಾಸ ಮತ್ತು ಪ್ರಭಾವ**

ಭಾಷೆ ಮನುಷ್ಯನ ಅತ್ಯಂತ ಮಹತ್ವದ ಸಾಮಾಜಿಕ ಸಾಧನವಾಗಿದೆ. ತನ್ನ ಭಾವನೆಗಳು, ಆಲೋಚನೆಗಳು, ಅನುಭವ ಮತ್ತು ಸವಿಸ್ತಾರ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಯಬಯಸುವ ಮಾಧ್ಯಮವೇ ಭಾಷೆ ಮತ್ತು ಸಂವಹನ. ಈ ಕಾರ್ಯವು ಇಂದಿನ ತಂತ್ರಜ್ಞಾನ ಬೆಳವಣಿಗೆಯ ಜೊತೆಗೆ ಕ್ರಮೇಣ ವಿಕಸನವನ್ನು ಒಳಗೊಂಡಿದೆ. ಭಾಷೆಯ ವಿಕಾಸವು ಮಾನವನ ಬೌದ್ಧಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಗತಿಯನ್ನು

ಪ್ರತಿಬಿಂಬಿಸುವುದರಲ್ಲಿ ಸಂಶಯವಿಲ್ಲ! ಆದಿಮಾನವನ ಕಾಲದಲ್ಲಿ ಈಗಿನಂತೆ ಭಾಷೆ ಸ್ಪಷ್ಟತೆಯನ್ನು ಹೊಂದಿರಲಿಲ್ಲ. ಮೊದಲಿಗೆ ಮಾನವನು ತನ್ನ ಅಗತ್ಯ ಮತ್ತು ಅವಶ್ಯಕತೆಗಳನ್ನು ಕೇವಲ ಸಂಕೇತಗಳ ಮೂಲಕ, ಕೈ ಸನ್ನೆಯ ಮುಖಾಂತರ, ಮುಖಭಾವದ ಮೂಲಕ ಅಥವಾ ಧ್ವನಿಯ ಮೂಲಕ ವ್ಯಕ್ತಪಡಿಸುತ್ತಿದ್ದನು. ತನಗಾಗುವ ಭಯ, ಸಂತೋಷ, ನೋವು, ಹತಾಶೆ, ಸಂಕಟ ಮುಂತಾದ ಭಾವನೆಗಳನ್ನು ಸೂಚಿಸಲು ವಿಭಿನ್ನ ರೀತಿಯ ಶಬ್ದಗಳನ್ನು ಹೊರಡಿಸುತ್ತಿದ್ದನು. ಇವುಗಳೇ ಕ್ರಮೇಣ ಅರ್ಥಪೂರ್ಣ ಧ್ವನಿಗಳಾಗಿ ಬದಲಾದವು. ಇಂದು ತಂತ್ರಜ್ಞಾನವು ಈ ಭಾಷೆಗಳನ್ನು ಕೂಡ ಮೀರಿಸುವಂತೆ ಹೊಸ ಹೊಸ ಧ್ವನಿಗಳನ್ನು, ದೃಶ್ಯ ಮಾಧ್ಯಮಗಳನ್ನು ತಯಾರಿ ಮಾಡುವಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿದೆ.

ಮಾನವ ಸಮಾಜ ಜೀವಿಯಾಗಿ, ಸಂಘ ಜೀವಿಯಾಗಿ ವಾಸಿಸಲು ಆರಂಭಿಸಿದಾಗ ಅವನಿಗೆ ಸಂವಹನದ ಅಗತ್ಯ ಹೆಚ್ಚಾಯಿತು. ಇದರಿಂದ ಭಾಷೆ ಯಥೇಚ್ಛವಾಗಿ ಬೆಳೆಯಿತು. ಕಾಲಕ್ರಮೇಣ ಶಬ್ದ ಸಂಪತ್ತು ಹೆಚ್ಚಾಗಿ ವಾಕ್ಯ ರಚನೆ, ವ್ಯಾಕರಣ ರೂಪಗಳು, ನಿಯಮಗಳು ಬದಲಾದವು. ಇದರಿಂದಾಗಿ ತಂತ್ರಜ್ಞಾನವನ್ನು ಬಳಸಿಕೊಂಡ ಮಾನವ ಭಾಷೆಯ ಸ್ಪಷ್ಟತೆ ಮತ್ತು ಶುದ್ಧತೆಯನ್ನು ಪಡೆದುಕೊಂಡನು. ಬರವಣಿಗೆಯಲ್ಲೂ ಅತಿ ಹೆಚ್ಚು ಆವಿಷ್ಕಾರಗಳು ಕಂಡು ಬಂದವು. ಭಾಷೆಯ ವಿಕಾಸದಲ್ಲಿ ಇದು ಕೂಡ ಒಂದು ಮಹತ್ವದ ಹಂತವಾಯಿತು. ಲಿಪಿಯ ಮೂಲಕ ಜ್ಞಾನವನ್ನು ಹೆಚ್ಚಿಸುವುದು, ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯು ಕೂಡ ಸಾಧ್ಯವಾಗಿದೆ.

ಭಾಷೆಯ ವಿಕಸನದ ಹಂತದಲ್ಲಿ ಸಂಸ್ಕೃತಿ, ಧರ್ಮ, ವ್ಯಾಪಾರ ವಹಿವಾಟುಗಳು, ಯುದ್ಧಗಳು ಕೂಡ ಪ್ರಮುಖ ಪಾತ್ರ ವಹಿಸಿವೆ. ಹಲವು ಜನಾಂಗಗಳ ಸಂಪರ್ಕದಿಂದ ಹೊಸ ಪದಗಳು, ಶೈಲಿಗಳು ಭಾಷೆಗೆ ಸೇರಿಕೊಂಡವು. ಕನ್ನಡ ಭಾಷೆಗೆ ಹಿಂದಿ, ಸಂಸ್ಕೃತ, ತಮಿಳು, ತೆಲುಗು, ಉರ್ದು ಭಾಷೆಗಳ ಪದಗಳು ಸೇರಿಕೊಂಡವು, ಭಾಷಾ ಸಂಪತ್ತನ್ನು ಶ್ರೀಮಂತಗೊಳಿಸಿದವು. ಇದನ್ನೇ ಭಾಷಿಕ ವ್ಯತ್ಯಾಸ ಅಥವಾ ಭಾಷಾ ಎರವಲು ಎಂದು ಕೂಡ ಕರೆಯಬಹುದಾಗಿದೆ.

ವಿವಿಧ ಕಾಲಘಟ್ಟದ ನಂತರ ಭಾಷೆಯ ಸ್ವರೂಪ ಬದಲಾಗುತ್ತಾ ಬಂದಿತು. ಪೂರ್ವ ಹಳಗನ್ನಡದಿಂದ ಹಳೆಗನ್ನಡಕ್ಕೆ, ಹಳಗನ್ನಡದಿಂದ ನಡುಗನ್ನಡಕ್ಕೆ, ಅಲ್ಲಿಂದ ಹೊಸಗನ್ನಡಕ್ಕೆ ಸಾಕಷ್ಟು ಬದಲಾವಣೆಗಳು ಭಾಷೆಯ ಜೀವಂತಿಕೆಗೆ ಸಾಕ್ಷಿಯಾದವು. ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ಭಾಷೆಯಲ್ಲಿ ಕೂಡ ತಂತ್ರಜ್ಞಾನದಿಂದ ಹೊಸ ಪದಗಳು ಹುಟ್ಟಿಕೊಂಡವು. ಕೆಲವು ಸಂದರ್ಭದಲ್ಲಿ ಹಳೆಯ ಪದಗಳು ಮಾಯವಾದವು. ಇಂದಿನ ಜನಜೀವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಭಾಷೆಯ ವಿಕಸನದ ವೇಗವನ್ನು ಮತ್ತಷ್ಟು ತೀವ್ರಗೊಳಿಸಿದೆ. ಕೃತಕ ಬುದ್ಧಿಮತ್ತೆ, ದೂರವಾಣಿ, ಅಂತರ್ಜಾಲದ ಬಳಕೆ ಸಂಕ್ಷಿಪ್ತ ರೂಪ ಪಡೆದುಕೊಂಡು ಹೊಸ ಹೊಸ ಆವಿಷ್ಕಾರ ಅಭಿವ್ಯಕ್ತಿಗಳನ್ನು ಪಡೆದುಕೊಳ್ಳುತ್ತಿದೆ. ಇದರಿಂದ ಭಾಷೆ ಸದಾ ಚಲನಶೀಲವಾಗಿದ್ದು ಕಾಲಕ್ಕನುಗುಣವಾಗಿ ವಿಭಿನ್ನ ರೀತಿಯಲ್ಲಿ ರೂಪಾಂತರಗೊಳ್ಳುತ್ತಿದೆ.

**ಭಾಷೆಯ ಸರಳೀಕರಣ ಮತ್ತು ಸಂಕ್ಷಿಪ್ತ ಭಾಷೆಯ ವಿಕಸನ**

ಸಾಮಾಜಿಕ ಹಾಗೂ ಸಂವಹನ ಮಾಧ್ಯಮಗಳಲ್ಲಿ ಸರಳತೆ, ಸಂಕ್ಷಿಪ್ತತೆ ಅಗತ್ಯವಿರುವುದರಿಂದ ಭಾಷೆ ಹೆಚ್ಚು ಸರಳ ಹಾಗೂ ಸಂಕ್ಷಿಪ್ತಗೊಳ್ಳುತ್ತಿದೆ. ಸುದೀರ್ಘ ವಾಕ್ಯಗಳ ಬದಲು ಚಿಕ್ಕ ಚಿಕ್ಕ ವಾಕ್ಯಗಳು, ಸಂಕೇತಗಳು, ಸಂಕ್ಷಿಪ್ತ ರೂಪಗಳು ಬಳಕೆಯಾಗುತ್ತಿವೆ. How Are You ಎಂಬುದಕ್ಕೆ ಬದಲಾಗಿ Hw R U?, ಶುಭರಾತ್ರಿ ತಿಳಿಸಲು Gnsd ಹೀಗೆ ಭಾಷೆ

ಸರಳೀಕರಣಗೊಂಡಿದೆ ಮತ್ತು ಸಂಕ್ಷಿಪ್ತತೆಯ ರೂಪವನ್ನು ಪಡೆದುಕೊಂಡಿದೆ. ಇದು ಶುದ್ಧ ಭಾಷಾ ಪ್ರಜ್ಞೆಗೆ ಕೆಲವೊಮ್ಮೆ ಧಕ್ಕೆ ಆಗಲೂಬಹುದು ಎಂಬ ಅರಿವಿರಲಾರದು.

**ಭಾಷೆಯ ಅಭಿವೃದ್ಧಿ ಮತ್ತು ಸಂಕೇತಗಳ ಬಳಕೆ**

ಸಂಕ್ಷಿಪ್ತ ಮತ್ತು ಸರಳ ಭಾಷೆಯ ಬಳಕೆಯನ್ನು ಉತ್ತೇಜಿಸುವ ಮೂಲಕ ಭಾಷೆಯನ್ನು ಜನಸಾಮಾನ್ಯರಿಗೆ ತಂತ್ರಜ್ಞಾನ ಹತ್ತಿರ ಮಾಡುತ್ತದೆ. ಯುವ ಜನತೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಹೊಸ ಹೊಸ ಆವಿಷ್ಕಾರಗಳನ್ನು ಸೃಷ್ಟಿಸಲು ನೆರವಾಗುತ್ತಿದೆ. ಅತಿಯಾದ ಸಂಕ್ಷಿಪ್ತತೆ ಮತ್ತು ತಪ್ಪಾದ ವ್ಯಾಕರಣದ ಬಳಕೆಯಿಂದ ಭಾಷೆಯ ಸಾಂಪ್ರದಾಯಿಕ ರೂಪದ ಮೇಲೂ ಕೂಡ ಗಮನ ಕಡಿಮೆಯಾಗಬಹುದು.

ಹೊಸ ಪದಗಳ ಪತ್ತೆ ಹಚ್ಚುವಿಕೆ, ಭಾಷಾ ಕಲಿಕೆ ಮತ್ತು ಶಿಕ್ಷಣ, ವ್ಯಾಕರಣ ಮತ್ತು ತಿದ್ದುಪಡಿ, ಭಾಷಾ ವೈವಿಧ್ಯತೆಯ ಸವಾಲುಗಳು, ಸೃಜನಶೀಲತೆ ಮೇಲಿನ ಪ್ರಭಾವ ಮುಂತಾದ ಮಾನವೀಯ ಭಾವನೆ ಮತ್ತು ಆಳವಾದ ಸೃಜನಶೀಲತೆಯನ್ನು ಹೊಂದಿಲ್ಲದಿದ್ದರೂ ಭಾಷೆಯನ್ನು ಹೆಚ್ಚು ಪ್ರವೇಶಿಸಬಹುದಾದ ಮತ್ತು ಸಂವಹನಕಾರಿಯಾಗಿ ಮಾಡುತ್ತಿವೆಯಾದರೂ ಮಾನವ ಭಾಷೆಯ ಅನನ್ಯತೆಯನ್ನು ಕಾಪಾಡಿಕೊಳ್ಳುವುದು ಕೂಡ ಒಂದು ಸವಾಲಾಗಿದೆ.

**ಭಾಷೆಯ ಮೇಲೆ ಎ.ಐ. ನ ಪ್ರಭಾವ ಮತ್ತು ಮಹತ್ವ**

- ನೈಜ ಸಮಯದ ಭಾಷಾಂತರ.
- ಸ್ವಯಂ ಚಾಲಿತ ವಿಶೇಷ ರಚಿಸುವಿಕೆ.
- ಧ್ವನಿ ಗುರುತಿಸುವಿಕೆ ಮತ್ತು ಸಂಭಾಷಣೆ.
- ಭಾವನೆಗಳ ಅಭಿವೃದ್ಧಿ ಮತ್ತು ಎಮೋಜಿಗಳ ಬಳಕೆ.
- ಯುವಜನತೆ ಮತ್ತು ಭಾಷಾ ಬದಲಾವಣೆ.

**ಸಕಾರಾತ್ಮಕ ಪರಿಣಾಮಗಳು:**

ಸಾಮಾಜಿಕ ಮಾಧ್ಯಮಗಳು ತಂತ್ರಜ್ಞಾನಗಳು ಭಾಷಾ ಕಲಿಕೆಗೆ ಸಹಾಯಕವಾಗಿವೆ. ಅನ್ಯ ಭಾಷಾ ಪದಗಳು, ಉಚ್ಚಾರಣೆ ಮತ್ತು ಬಳಕೆಯನ್ನು ಸುಲಭವಾಗಿ ಕಲಿಯಬಹುದು. ಇದಲ್ಲದೆ ದೂರ ದೂರದ ಜನರೊಂದಿಗೆ, ದೇಶ ವಿದೇಶಗಳೊಂದಿಗೆ ಸಂವಹನ ನಡೆಸುವ ಮೂಲಕ ಭಾಷೆಯ ವ್ಯಾಪ್ತಿ ಹೆಚ್ಚಾಗಿದೆ. ಸಾಹಿತ್ಯಕಾರರು, ಬರಹಗಾರರಿಗೆ ತಮ್ಮ ಕೃತಿಗಳನ್ನು ಜನರಿಗೆ ಬಹುಬೇಗವಾಗಿ ಸುಲಭವಾಗಿ ತಲುಪಿಸಲು ಈ ತಂತ್ರಗಳನ್ನು ಅತ್ಯುತ್ತಮ ವೇದಿಕೆಯಾಗಿ ಬಳಸಲಾಗಿದೆ. ಸಮಯದ ನಿರ್ವಹಣೆ ಸಾಧ್ಯವಾಗಿದೆ. ಹೊಸ ಹೊಸ ಆವಿಷ್ಕಾರಗಳನ್ನು ಹೊರ ತರುವ ಪ್ರಯತ್ನ ನಿರಂತರವಾಗಿ ಸಾಗುತ್ತಿದೆ. ವಿಭಿನ್ನ ಮಾದರಿಯ, ವಿಶಿಷ್ಟ ಶೈಲಿಯ ಆಧುನಿಕ ತಂತ್ರಜ್ಞಾನ ಇಂದು ಜನರೆಲ್ಲರ ಮೆಚ್ಚಿನ ಮನೆ ಮಾತಾಗಿದೆ.

**ನಕಾರಾತ್ಮಕ ಪರಿಣಾಮಗಳು:**

ಇದೇ ಸಮಯದಲ್ಲಿ ಶುದ್ಧ ವ್ಯಾಕರಣದ ಕೀಲಿಮಣೆಗಳು, ಅಸಭ್ಯ ಭಾಷೆಯ ಬಳಕೆ ಮತ್ತು ಪ್ರಾದೇಶಿಕ ಭಾಷೆಗಳ ಮೂಲ ಸ್ವರೂಪಗಳ ಸವಾಲುಗಳು ಕೂಡ ಎದುರಾಗುತ್ತಿವೆ. ಶುದ್ಧ ಭಾಷೆಯ ಬಳಕೆ ಕುಗ್ಗುವುದು, ವ್ಯಾಕರಣ ದೋಷಗಳು ಹೆಚ್ಚಾಗುವುದು, ಕೆಲವೊಂದು ಅಶ್ಲೀಲ ಶಬ್ದಗಳ ಬಳಕೆ, ಭಾಷೆಯ ಸಂಕ್ಷಿಪ್ತತೆಯಿಂದ ಅಭ್ಯಾಸದ ಕೊರತೆ, ಬರವಣಿಗೆ ದೋಷಗಳು, ವ್ಯಾಕರಣ ದೋಷಗಳು, ಭಾವನೆಗಳ ಕೊರತೆ ಮುಂತಾದ ನಕಾರಾತ್ಮಕ ಪರಿಣಾಮಗಳನ್ನು ಕೂಡ ಪಟ್ಟಿ ಮಾಡಬಹುದಾಗಿದೆ. ಕೆಲವು ಸಂದರ್ಭಗಳಲ್ಲಿ ಭಾಷೆಯ

ದುರುಪಯೋಗವೂ ಕೂಡ ಕಂಡುಬಂದಿರುವುದು ವಿಪರ್ಯಾಸ.

**ಉಪಸಂಹಾರ**

ಒಟ್ಟಾರೆ ಇಂದಿನ ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಸಾಮಾಜಿಕ ಮಾಧ್ಯಮಗಳು ಭಾಷೆಯ ಮೇಲೆ ತುಂಬಾ ಆಳವಾದ ಪ್ರಭಾವವನ್ನು ಬೀರಿರುವುದರಲ್ಲಿ ಸಂಶಯವಿಲ್ಲ. ಇವು ಭಾಷೆಯ ವಿಸ್ತಾರ, ಭಾಷೆಯ ಪ್ರಸಾರ ಮತ್ತು ಆಧುನಿಕತೆಗೆ ಕಾರಣವಾಗಿದ್ದರೂ ನಾವೀನ್ಯತೆ ಕಾಪಾಡುವಲ್ಲಿ ಎಚ್ಚರಿಕೆ ವಹಿಸುವುದು ಅಗತ್ಯ. ನಾವು ಸಾಮಾಜಿಕ ಮಾಧ್ಯಮಗಳನ್ನು, ತಂತ್ರಜ್ಞಾನಗಳನ್ನು ಬಳಸುವಾಗ ಭಾಷೆಯ ಗೌರವವನ್ನು, ಭಾವನೆಯನ್ನು ಕಾಪಾಡಿಕೊಂಡು ಶುದ್ಧ ಮತ್ತು ಸಾರ್ಥಕ ಭಾಷೆಯನ್ನು ಬಳಸಿಕೊಂಡರೆ, ಅಳವಡಿಸಿಕೊಂಡರೆ ಭಾಷೆಯ ಬೆಳವಣಿಗೆ, ಸಂವಹನ ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳು ಮನುಷ್ಯನ ಶಕ್ತಿಯ ಸಾಧನವಾಗುವುದರಲ್ಲಿ ಅತಿಶಯೋಕ್ತಿ ಇಲ್ಲ!

**ಪರಾಮರ್ಶನ ಕೃತಿಗಳು:**

1. ಕೃಷ್ಣ ಎಂ.ಹೆಚ್., (1941), ಕನ್ನಡ ಸಾಹಿತ್ಯದ ಪ್ರಾಚೀನತೆ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
2. ಚಿದಾನಂದಮೂರ್ತಿ ಎಂ., (1965), ತೌಲನಿಕ ಭಾಷಾ ವಿಜ್ಞಾನ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
3. ರಾಜಪ್ಪ ದಳವಾಯಿ, (1996), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಬೆಂಗಳೂರು: ಸೃಷ್ಟಿ ಪ್ರಕಾಶನ.